ನಿರರ್ಗಳವಾಗಿ ಮಾತನಾಡುತ್ತಾನೆ. 'ವದ್ಧಾss...' ಅಂದರೆ ವೆರಿ ಗುಡ್, ಅಲ್ರೇ ವ್ಹಾ, ಒಳ್ಳೇದು, ಹಾಗೇ ಆಗಲಿ... ಹೀಗೇ ಅನೇಕ ಅರ್ಥಗಳಾಗಿ ಬಳಸಬಹುದಂತೆ. ಆ ಶಬ್ದದ ವರ್ಸಟಾಲಿಟಿಯ ಬಗ್ಗೆ ಆತನಿಗೆ ಬಹಳೇ ಹೆಮ್ಮೆಯಿದೆ. ಎಷ್ಟೇ ಜನರಿರಲಿ, ಯಾವುದೇ ಮಿಟಿಂಗ್ ಇರಲಿ ಕಿಂಚಿತ್ ಮುಲಾಜೂ ಇಲ್ಲದೇ ಆತ ಆ ಪದವನ್ನು ಬಳಕೆ ಮಾಡುತ್ತಾನೆ. ಇತರರಿಗೆ ಅರ್ಥವಾಗಲಿ ಬಿಡಲಿ, ಅದು ಮಾತಿನ ನಡುವೆ ಬಹಳೇ ಚೆನ್ನಾಗಿ ಹೊಂದಿಕೆಯಾಗುವುದಂತೂ ನಿಜ.

ಆತ ಹೆಚ್ಚಿನ ದಿನಗಳನ್ನು ಸ್ಪೇನ್ ಹಾಗೂ ಥಾಯ್ಲೆಂಡ್‌ನಲ್ಲೇ ಕಳೆಯುವುದರಿಂದ ಬಾರ್ಸಿಲೋನಾ ಹಾಗೂ ಬ್ಯಾಂಕಾಕಿನಲ್ಲಿ ಕಂಪೆನಿಯವರೇ ಅವನಿಗೆ ಮನೆ ಕೊಟ್ಟಿದ್ದಾರೆ. ಭಾರತಕ್ಕೆ ಬಂದರೆ ಹೆಚ್ಚಾಗಿ ಆತ ಬರುವುದು ಬೆಂಗಳೂರಿಗೇ. ಬಂದಾಗ ಆತ ಸಿಟಿಯೊಳಕ್ಕೆ ಬರುವುದು ಅತೀ ಕಮ್ಮಿ. ಒಂದೆರಡು ದಿನಗಳ ಮಟ್ಟಿಗೆ ಬಂದರಂತೂ ಆತ ಊರಿಂದ ಹೊರಗಿರುವ ಏರ್‌ಪೋರ್ಟಿನ ಬಿಸನೆಸ್ ಲಾಂಜಿನಲ್ಲಿಯೇ ದಿನ ಕಳೆಯುತ್ತಾನೆ. ನಗರದೊಳಕ್ಕೆ ಎಲ್ಲೇ ಹೋಗಬೇಕೆಂದರೂ ಅಲ್ಲಿಯ ಭೀಕರ ಟ್ರಾಫಿಕ್ ಆತನಿಗೆ ಸಹಿಸಲಾಗುವುದಿಲ್ಲ. ಹಾಗೆ ಬೆಂಗಳೂರಿಗೆ ಬಂದಾಗಲೆಲ್ಲ ಆತ ನನ್ನನ್ನು ಭೇಟಿ ಮಾಡದೇ ಹೋದದ್ದೇ ಇಲ್ಲ. ನಮ್ಮ ಭೇಟಿಯೇನಿದ್ದರೂ ವಿಮಾನ ನಿಲ್ದಾಣದ ಹತ್ತಿರವೇ ಇರುವ 'ಬರಿಸ್ತಾ' ಹೋಟೆಲಿನಲ್ಲಿ. ಏರ್‌ಪೋರ್ಟಿನ ಲಾಂಜಿನಲ್ಲಿ ನನಗೆ ಪ್ರವೇಶ ಸಾಧ್ಯವಿಲ್ಲವಾದ್ದರಿಂದ ಬರಿಸ್ತಾ ನಮ್ಮ ಮೀಟಿಂಗ್ ಸ್ಥಳವಾಗಿದೆ; ಇಲ್ಲದಿದ್ದರೆ ಏರ್‌ಪೋರ್ಟ್ ಬಿಟ್ಟು ಹೊರಗೇ ಕಾಲಿಡುತ್ತಿರಲಿಲ್ಲ ತಾನು ಎನ್ನುತ್ತಾನಾತ.

ನಿಜ ಹೇಳಬೇಕೆಂದರೆ ಆತ ಮೊದಲನೆಯ ಬಾರಿ ಬರಿಸ್ತಾದಲ್ಲಿ ಭೇಟಿಗೆ ಕರೆದಾಗ ಸರಿಯಾದ ಸಿದ್ಧತೆ ಮಾಡಿಕೊಂಡು ಹೋಗಲೂ ಸಾಧ್ಯವಾಗಿರಲಿಲ್ಲ ನನಗೆ. ಆಫೀಸಿನಿಂದ ನೇರವಾಗಿ ಅಲ್ಲಿಗೇ ಹೋಗುವ ಪ್ರಮೇಯವಿತ್ತು. ನನ್ನ ಶೂಗಳು ಕೊಳಕಾಗಿದ್ದವು. ಅಲ್ಲಿಯ ಹೊಳೆಯುವ ವಿಟ್ರಿಫೈಡ್ ನೆಲ ನೆನಪಾಗಿ ಮಾರ್ಗದ ಮಧ್ಯದಲ್ಲಿಯೇ ಪಾಲಿಶ್ ಹಾಗೂ ಬ್ರಷ್ಷುಗಳನ್ನು ಕೊಂಡು, ರಸ್ತೆಯ ಬದಿಯಲ್ಲಿ ಬೈಕಿನ ಮೇಲೆ ಕುಳಿತು ಬೂಟುಗಳನ್ನು ಹೊಳಪಾಗಿಸಿಕೊಂಡಿದ್ದೆ. ನನ್ನ ಬೆಲ್ಟಿನ ಹುಕ್ಕು ಸಿಕ್ಕಿಸುವ ಕಣ್ಣಿನ ಸುತ್ತ ಬಿರುಕು ಬಿಟ್ಟು ಬಣ್ಣಗೆಟ್ಟಿರುವುದನ್ನು ಗಮನಿಸಿ ಹೊಸ ಬೆಲ್ಟು ಕೊಂಡುಕೊಂಡಿದ್ದೆ. ಆದರೂ ನಾನು ಧರಿಸಿದ ಅಂಗಿ ಹಾಗೂ ಪ್ಯಾಂಟಿನ ಬಗ್ಗೆ ಅಷ್ಟೇನೂ ಸಮಾಧಾನವಿರಲಿಲ್ಲ. ಇಷ್ಟೆಲ್ಲಾ ಮಾಡಿಕೊಂಡು ಹೋಗಿ ನೋಡಿದರೆ ಅಲ್ಲಿ ಮೋ ಬನಿಯನ್ನಿನಂತಹ ತೆಳೂ ಅಂಗಿ, ದೊಗಳೆ ಚಡ್ಡಿ ಹಾಕಿ ಕುಳಿತಿದ್ದ. ಆಗಲೇ ನನಗೆ ಅರಿವಾದದ್ದು ನಾವು ಏನು ಧರಿಸುತ್ತೇವೆ ಎನ್ನುವುದು ಮುಖ್ಯವಲ್ಲ; ಎಷ್ಟು ಬೆಲೆಯದ್ದನ್ನು ಧರಿಸಿದ್ದೇವೆ ಎನ್ನುವುದೇ ಮುಖ್ಯ. ಅದಕ್ಕೇ ನಾನು ನಾನು ನಂತರದ ಕೆಲವೇ ದಿನಗಳಲ್ಲಿ ಒಂದು ಹೊಸ ಅಂಗೈ ಅಗಲ ಗಾತ್ರದ ಆಂಡ್ರಾಯ್ಡ್ ಫೋನ್ ಖರೀದಿಸಿದ್ದು. ಕ್ರೆಡಿಟ್ ಕಾರ್ಡ್ ಇದ್ದರೆ ಇದೇ ಅನುಕೂಲ.

ಆತ ದುಡ್ಡಿನ ವಿಷಯ ಮಾತನಾಡುವಾಗಲೆಲ್ಲಾ ಡಾಲರ್‌ಗಳಲ್ಲಿಯೇ ಮಾತನಾಡುತ್ತಾನೆ. ಭಾರತದಲ್ಲೇ ಇದ್ದರೂ ಆತ ಬಳಸುವುದು ಡಾಲರ್‌ಗಳ ಲೆಕ್ಕವನ್ನೇ. ಮೂರು ಡಾಲರ್ ಕೊಟ್ಟರೂ ಇಲ್ಲೊಳ್ಳೆ ಊಟ ಸಿಗುವುದಿಲ್ಲ ಎನ್ನುವುದರಿಂದ ಹಿಡಿದು ಫ್ಲೈಓವರ್‌ಗಳಿಗಂತಲೇ ವರ್ಷಕ್ಕೆ ಇಷ್ಟು ಡಾಲರ್ ಅಂತಾ ತೆಗೆದಿಡಲು ಸರಕಾರಕ್ಕೇನು ಧಾಡಿ ಎನ್ನುವವರೆಗೂ. ಯಾರಾದರೂ ಡಾಲರ್, ಮಿಲಿಯನ್ ಎನ್ನುವ ಪದಗಳನ್ನು ಉಪಯೋಗಿಸತೊಡಗಿದರೆ ನನಗೆ ಭಯವಾಗಿಬಿಡುತ್ತದೆ. ಮೊದಲೇ ಗಣಿತದಲ್ಲಿ ವೀಕು ನಾನು. ಮಾತಿನ ನಡುವೆಯೇ, ಹೇಳಿದ